

ನೀರು ಗೊಬ್ಬರ ಹಾಕಿದರು. ತೋಟ ನಳನಳಿಸಿತು, ಫಸಲು ಹುಲುಸಾಗಿ ಬೆಳೆಯಿತು. ಅವನಿಗೆ ನಿತ್ಯವೂ ಯಾವ ಮರದಲ್ಲಿ ಬಂಗಾರದ ಮಾವು ಬಿಟ್ಟಿದೆ ಎಂದು ನೋಡುವುದೇ ಕೆಲಸವಾಗಿತ್ತು.

ಈ ಬಾರಿ ಉತ್ತಮ ಮಳೆಯೂ ಆಗಿ ಮಾವಿನಮರ ಕಾಯಿ ಬಿಡಲು ಶುರುಮಾಡಿತು. ಸಿಂಗಾರನ ಸಂತೋಷಕ್ಕೆ ಪಾರವೇ ಇರಲಿಲ್ಲ. ಮರದ ತುಂಬಾ ಗೊಂಚಲು ಗೊಂಚಲಾಗಿ ಮಾವಿನ ಕಾಯಿಗಳು ತೂಗಾಡಿದವು. ಸಮೃದ್ಧ ಬೆಳೆಯನ್ನು ನೋಡುವುದೇ ಕಣ್ಣಿಗೆ ಹಬ್ಬವಾಗಿತ್ತು. ಇಷ್ಟು ಕಾಯಿಯಲ್ಲಿ ಯಾವ ಕಾಯಿ ಚಿನ್ನದ್ದಾಗಿರುತ್ತದೋ ಎಂದವನು ಕಾತುರದಿಂದ ಹುಡುಕುತ್ತಲೇ ಇದ್ದ. ಆದರೆ, ಯಾವ ಕಾಯಿಯೂ ಬಂಗಾರವಾಗಲೇ ಇಲ್ಲ. ಅಷ್ಟರಲ್ಲಿ ಪಕ್ಕದ ನಗರದಲ್ಲಿದ್ದ ಹಣ್ಣಿನ ರಸ ತಯಾರಿಸುವ ಕಾರ್ಖಾನೆಯವರು ಇವನ ತೋಟದಲ್ಲಿ ಬೆಳೆದಿದ್ದ ಹುಲುಸಾದ ರಸಭರಿತ ಮಾವಿನ ಹಣ್ಣುಗಳನ್ನು ನೋಡಿ ಕೈತುಂಬಾ ದುಡ್ಡು ಕೊಟ್ಟು ಕೊಂಡುಕೊಂಡರು.

ಸಿಂಗಾರನಿಗೆ ಅಪಾರ ಹಣ ಸಿಕ್ಕಿತು. ಅವನಿಗೆ ಅಷ್ಟು ಹಣ ಸಿಗಬಹುದೆಂಬ ಕಲ್ಪನೆಯೇ ಇರಲಿಲ್ಲ. ಇದಲ್ಲದೆ ಇನ್ನೂ ಒಂದೆರಡು ಫಸಲು ಕೈಗೆ ಸಿಕ್ಕು, ಹಣ ಬರುವುದಿತ್ತು. ಏನು ಬೇಕಾದರೂ ಕೊಂಡುಕೊಳ್ಳುವಷ್ಟು ಹಣ ಅವನಲ್ಲಿ ಸೇರಿತ್ತು. ಈಗ ಅವನಿಗೆ ತಂದೆಯ ಮಾತಿನ ಅರ್ಥ ಗೊತ್ತಾಯಿತು. ಬಂಗಾರದ ಮಾವು ಬಿಡುವ ಮರ ಯಾವುದೂ ಇಲ್ಲ. ತಾನು ಕಷ್ಟಪಟ್ಟು ದುಡಿದರೆ ಬಂಗಾರ ಸಿಗುತ್ತದೆ ಎಂಬುದನ್ನು ಮನವರಿಕೆ ಮಾಡಿಕೊಡಲೆಂದೇ ತಂದೆ ಚಿನ್ನದ ಮಾವು ಬಿಡುತ್ತದೆ ಎಂಬ ಕಥೆ ಕಟ್ಟಿ ಹೇಳಿದನೆಂದು ತಿಳಿಯಿತು. ಬಂಗಾರದ ಆಸೆಗೆ ತಾನು ತೋಟವನ್ನು ಪೋಷಿಸಿದ್ದಕ್ಕೆ ಅದು ಉತ್ತಮ ಫಲ ಕೊಟ್ಟಿತು. ಹಣ ಬಂತು. ಅದರಿಂದ ಬಂಗಾರದ ಮಾವನ್ನೇ ಕೊಳ್ಳಬಹುದು ಎನ್ನುವುದು ಅರಿವಾಯಿತು. ಕಷ್ಟಪಟ್ಟು ದುಡಿದರೆ ಫಲ ಸಿಕ್ಕೇ ಸಿಗುತ್ತದೆ ಎನ್ನುವುದನ್ನು ಮನಗಂಡ.